# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಸೈಯದ್ ಮುಕ್ತಾರ್ ಕಿರಿಯ ಇಂಜಿನಿಯರ್ ಇವರ ವಿರುದ್ಧದ ಆರೋಪಗಳಿಗೆ ಅನುಗುಣವಾಗಿ ವಿಧಿಸಿರುವ ದಂಡನೆಯ ವಿರುದ್ಧ ಮಾನ್ಯ ನ್ಯಾಯ ಮಂಡಳಿಯು ನೀಡಿರುವ ಆದೇಶದ ಬಗ್ಗೆ- ಅಂತಿಮ ಆದೇಶ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂ: ಗ್ರಾಅಪ 16 ಇಎನ್‌ಕ್ಯೂ 2010, ದಿನಾಂಕ:17.07.2015.
2. ಮಾನ್ಯ ನ್ಯಾಯ ಮಂಡಳಿಯ ಆದೇಶ ದಿನಾಂಕ: 24.10.2017.
3. ಮಾನ್ಯ ನ್ಯಾಯ ಮಂಡಳಿಯ ಆದೇಶ ದಿನಾಂಕ: 23.07.2020.

***

**ಪ್ರಸ್ತಾವನೆ :**

ಯಾದಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ 2009-10ನೇ ಸಾಲಿನಲ್ಲಿ ಕೈಗೊಳ್ಳಲಾದ ಸಣ್ಣ ನೀರಾವರಿ ಇಲಾಖೆಯ 50 ಟ್ಯಾಂಕ್‌ಗಳ ದುರಸ್ಥಿ ಮತ್ತು ನಿರ್ವಹಣೆ ಕಾಮಗಾರಿಗಳಲ್ಲಿ ಆಗಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ಕಲಬುರಗಿ ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಸದರಿ ಪ್ರಕರಣದಲ್ಲಿ ಒಟ್ಟು 13 ಜನ ಆಪಾದಿತರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11 ರಂತೆ ಇಲಾಖಾ ವಿಚಾರಣೆಯನ್ನು ಕೈಗೊಂಡು, ಸಾಬೀತಾದ ಆರೋಪಗಳಿಗನುಗುಣವಾಗಿ ಆಪಾದಿತರುಗಳ ಪೈಕಿ ಸೇವೆಯಲ್ಲಿರುವ ಅಧಿಕಾರಿ / ನೌಕರರುಗಳಿಗೆ ಉಲ್ಲೇಖಿತ (1)ರ ದಿನಾಂಕ: 17.7.2015ರ ಆದೇಶದಲ್ಲಿ ದಂಡನೆಯನ್ನು ವಿಧಿಸಲಾಗಿತ್ತು.

ಸರ್ಕಾರದ ಸದರಿ ದಂಡನಾ ಆದೇಶದ ವಿರುದ್ಧ ಎಲ್ಲಾ ಆಪಾದಿತರುಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಶ್ರೀ ಸೈಯದ್ ಮುಕ್ತಾರ್ ಕಿರಿಯ ಇಂಜಿನಿಯರ್ ಇವರು ಸರ್ಕಾರದ ದಿನಾಂಕ: 17.07.2015ರ ದಂಡನಾ ಆದೇಶವನ್ನು ಪ್ರಶ್ನಿಸಿ ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ: 6068/2017ನ್ನು ದಾಖಲಿಸಿದ್ದು, ಸದರಿ ಅರ್ಜಿಯ ವಿಚಾರಣೆ ನಡೆಸಿದ ಮಾನ್ಯ ನ್ಯಾಯ ಮಂಡಳಿಯು ಮೇಲೆ ಓದಲಾದ ಉಲ್ಲೇಖಿತ ಕ್ರಮಾಂಕ (2) ರ ದಿನಾಂಕ: 24.10.2017ರ ಆದೇಶದಲ್ಲಿ ಶ್ರೀ ಸೈಯದ್ ಮುಕ್ತಾರ್ ಕಿರಿಯ ಇಂಜಿನಿಯರ್ ಇವರಿಗೆ ಸೀಮಿತವಾಗಿ ಸರ್ಕಾರದ ಉಲ್ಲೇಖಿತ ಕ್ರಮಾಂಕ(1)ರ ದಿನಾಂಕ:17.07.2015ರ ದಂಡನಾದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.

...2

ಸದರಿ ಅರ್ಜಿ ಸಂಖ್ಯೆ: 6068/2017ರ ವಿಚಾರಣೆ ನಡೆಸಿದ ಮಾನ್ಯ ಕರ್ನಾಟಕ ನ್ಯಾಯ ಮಂಡಳಿಯು ಮೇಲೆ ಓದಲಾದ ಉಲ್ಲೇಖಿತ ಕ್ರಮಾಂಕ (4) ರ ದಿನಾಂಕ: 23.07.2020 ರ ಆದೇಶದಲ್ಲಿ ಖುಂಜ್ ಬಿಹಾರಿ ಮಿಶ್ರಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿದ ಆದೇಶದಂತೆ ಕ್ರಮವಹಿಸಲು ತಿಳಿಸಿ ದಿನಾಂಕ :17.07.2015ರ ಸರ್ಕಾರದ ದಂಡನಾ ಆದೇಶವನ್ನು ರದ್ದುಪಡಿಸಿ ಅಂತಿಮ ಆದೇಶ ಹೊರಡಿಸಿರುತ್ತದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಇತರೆ ಆಪಾದಿತರುಗಳಿಗೆ ಮಾನ್ಯ ನ್ಯಾಯ ಮಂಡಳಿಯ ಆದೇಶದ ಅನುಸಾರ ಮತ್ತೊಮ್ಮೆ 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಿ ಅವರುಗಳಿಂದ ವಿವರಣೆಯನ್ನು ಪಡೆದು ಪರಿಶೀಲಿಸಿ ಸಾಬೀತಾದ ಆರೋಪಗಳಿಗನುಗುಣವಾಗಿ ಮತ್ತೊಮ್ಮೆ ವಿಧಿಸಲಾದ ದಂಡನೆಯನ್ನು ಪ್ರಶ್ನಿಸಿ ಆಪಾದಿತರುಗಳು ಮಾನ್ಯ ನ್ಯಾಯಮಂಡಳಿಯಲ್ಲಿ ಸಲ್ಲಿಸಿದ್ದ ಅರ್ಜಿಗಳನ್ನು ಸಹ ಮಾನ್ಯ ನ್ಯಾಯ ಮಂಡಳಿಯು ವಿಚಾರಣೆ ನಡೆಸಿ ಪುನ: ಸರ್ಕಾರದ ದಂಡನಾದೇಶವನ್ನು ರದ್ದುಪಡಿಸಿರುತ್ತದೆ. ಸರ್ಕಾರಿ ವಕೀಲರು ಸಹ ಮಾನ್ಯ ನ್ಯಾಯ ಮಂಡಳಿಯು 2ನೇ ಬಾರಿ ದಂಡನಾದೇಶವನ್ನು ರದ್ದುಪಡಿಸಿರುವ ಆದೇಶವು ಮೇಲ್ಮನವಿಗೆ ಅರ್ಹ ಪ್ರಕರಣವಲ್ಲವೆಂದು ಅಭಿಪ್ರಾಯಿಸಿರುತ್ತದೆ.

ಈ ಸಂಬಂಧ ಮಾನ್ಯ ಆಡಳಿತ ನ್ಯಾಯ ಮಂಡಳಿಯು ಪರಿಗಣಿಸಿರುವ ಅಂಶಗಳೆಂದರೆ ವಿಚಾರಣಾಧಿಕಾರಿಯವರು ಇಲಾಖಾ ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದರೂ ಸಹ ಸರ್ಕಾರವು ವಿಚಾರಣಾ ವರದಿಯನ್ನು ಒಪ್ಪದೇ ಪುನರ್ ಪರಿಶೀಲಿಸಿ ಪ್ರಕರಣದಲ್ಲಿ ಪ್ರಮುಖವಾಗಿ ಕಾಮಗಾರಿಗಳ ತಪಾಸಣೆಯನ್ನು ಮೆಸ್. ಪ್ರಿಮಿಯರ್ ಟೆಕ್ನಿಕಲ್ ಕನ್ಸಲ್ಟೆನ್ಸಿ ಮತ್ತು ಮೆಸ್. ನಿಕೇತನ್ ಕನ್ಸಲ್ಟೆನ್ಸಿ ಇವರುಗಳು ಕೈಗೊಂಡು ವರದಿಯನ್ನು ಸಲ್ಲಿಸಿರುವರು. ಮೆಸ್. ಪ್ರಿಮಿಯರ್ ಟೆಕ್ನಿಕಲ್ ಕನ್ಸಲ್ಟೆನ್ಸಿ ಇವರ ವರದಿಯಲ್ಲಿ ಕಾಮಗಾರಿಗಳು ಮಂಜೂರಾದ ಅಂದಾಜಿನಂತೆ ಅನುಷ್ಠಾನಗೊಂಡಿರುವ ಬಗ್ಗೆ ತಿಳಿಸಿರುತ್ತಾರೆ. ಆದರೆ, ಮೆಸ್. ನಿಕೇತನ್ ಕನ್ಸಲ್ಟೆನ್ಸಿ ಇವರು ಸದರಿ ಕಾಮಗಾರಿಗಳನ್ನು ಆರು ತಿಂಗಳ ನಂತರ ಪರಿಶೀಲಿಸಿದ್ದು, ಕಾಮಗಾರಿಗಳನ್ನು ಮಂಜೂರಾದ ಅಂದಾಜಿನಂತೆ ನಿರ್ವಹಿಸಿಲ್ಲವೆಂದು ತಿಳಿಸಿ ಆರ್ಥಿಕ ನಷ್ಟ ಉಂಟಾಗಿರುವ ಬಗ್ಗೆ ವರದಿ ಮಾಡಿದ್ದರು. ಆದರೆ, ಇಲಾಖಾ ವಿಚಾರಣೆಯಲ್ಲಿ ಈ ಎರಡು ಕನ್ಸಲ್ಟೆನ್ಸಿಗಳ ಸಾಕ್ಷಿ ಹೇಳಿಕೆಗಳನ್ನು ಪಡೆಯದೇ ವಿಚಾರಣಾಧಿಕಾರಿಯವರು ವರದಿ ತಯಾರಿಸಿದ್ದರು. ಆದರೆ, ಮಾನ್ಯ ಕೆ.ಎ.ಟಿ.,ಯ ಆದೇಶದಲ್ಲಿ ಸರ್ಕಾರದ ಪರವಾಗಿ ಮಂಡನಾಧಿಕಾರಿಯವರು ಸಾಕ್ಷಿಗಳನ್ನು ಇಲಾಖಾ ವಿಚಾರಣೆಗೆ ಕರೆಯಿಸಿ ಅವುಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಹೊಂದಿದ್ದು ಅದಕ್ಕೆ ವಿಚಾರಣಾಧಿಕಾರಿಯವರು ಜವಾಬ್ದಾರರಲ್ಲವೆಂದು ಹಾಗೂ ಶಿಸ್ತು ಪ್ರಾಧಿಕಾರವು ವಿಚಾರಣಾ ವರದಿಗೆ ತನ್ನ ಅಸಹಮತ ತೋರಿರುವುದು ಯಾವುದೇ ದಾಖಲೆಗಳನ್ನು ಆಧರಿಸಿದ ನಿರ್ಣಯವಲ್ಲವೆಂದು ಅಂತಿಮವಾಗಿ ಅಭಿಪ್ರಾಯಪಟ್ಟು ದಂಡನಾದೇಶವನ್ನು ರದ್ದುಪಡಿಸಿರುತ್ತದೆ.

ಸರ್ಕಾರವು ಮಾನ್ಯ ನ್ಯಾಯ ಮಂಡಳಿಯು ನೀಡಿರುವ ಆದೇಶವನ್ನು ಪರಿಗಣಿಸಿರುತ್ತದೆ. ಇಲಾಖಾ ವಿಚಾರಣೆ ಸಂದರ್ಭದಲ್ಲಿ ಸಾಕ್ಷಿಗಳ ಪರಿಶೀಲನೆಗೆ ವಿಫಲರಾಗಿರುವುದು ಮಂಡನಾಧಿಕಾರಿಯವರ ಲೋಪವಾಗಿದ್ದು, ಅದನ್ನೇ ಮೂಲಾಧಾರವಾಗಿಟ್ಟುಕೊಂಡು ವಿಚಾರಣಾ ವರದಿಯನ್ನು ಒಪ್ಪದೇ ಇರುವುದು ಯಾವುದೇ ದಾಖಲೆಗಳನ್ನು ಆಧರಿಸಿದ ನಿರ್ಣಯವಾಗುವುದಿಲ್ಲವೆಂದು ಮಾನ್ಯ ನ್ಯಾಯ ಮಂಡಳಿಯು ಅಭಿಪ್ರಾಯಪಟ್ಟಿರುವುದರಿಂದ ಹಾಗೂ ಈ ಪ್ರಕರಣದಲ್ಲಿ ವಿಚಾರಣಾ ವರದಿ ಸ್ವೀಕೃತವಾಗಿ ಎಂಟು ವರ್ಷಗಳಿಗೂ ಹೆಚ್ಚಿನ ಅವಧಿ ಗತಿಸಿರುವುದರಿಂದ ಈ ಹಂತದಲ್ಲಿ ಸದರಿ ಪ್ರಕರಣದ ಕುರಿತು ಪರಿಶೀಲನಾ ಕ್ರಮ ಕೈಗೊಳ್ಳುವುದು ಸಮಂಜಸವೆನಿಸುವುದಿಲ್ಲ. ಆದ್ದರಿಂದ, ಮಾನ್ಯ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶವನ್ನು ಒಪ್ಪಿ ಶ್ರೀ ಸೈಯದ್ ಮುಕ್ತಾರ್, ಕಿರಿಯ ಇಂಜಿನಿಯರ್ ಪಂ.ರಾ.ಇಂ. ಉಪವಿಭಾಗ, ಯಾದಗಿರಿ ಇವರಿಗೆ ಸೀಮಿತವಾಗಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ನಿರ್ಣಯಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 480 ಜಿಪಅ 2017,**
**ಬೆಂಗಳೂರು, ದಿನಾಂಕ:30.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಸೈಯದ್ ಮುಕ್ತಾರ್, ಕಿರಿಯ ಇಂಜಿನಿಯರ್ ಪಂ.ರಾ.ಇಂ. ಉಪವಿಭಾಗ, ಯಾದಗಿರಿ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 16 ಇಎನ್‌ಕ್ಯೂ 2010, ದಿನಾಂಕ:17.07.2015ರಲ್ಲಿ ವಿಧಿಸಿರುವ ದಂಡನೆಯನ್ನು ಇವರಿಗೆ ಸೀಮಿತವಾಗಿ ರದ್ದುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ನದೀಮ್ ಆಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ (ನೋಂದಾಯಿತ ಅಂಚೆ ಮುಖಾಂತರ)
4. ಸಂಬಂಧಪಟ್ಟ ನೌಕರರಿಗೆ.

**ಪ್ರತಿಯನ್ನು:**

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು(ಆಡಳಿತ-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ.
4. ಹೆಚ್ಚುವರಿ ಪ್ರತಿ / ರಕ್ಷಾ ಕಡತ / ಕಂಪ್ಯೂಟರ್ ಸೆಲ್.